# ತತ್ವಪದಕಾರರು ಮತ್ತು ಬದುಕುಬರಹ: ಒಂದು ನೋಟ

**ಸಿ. ಪುಟ್ಟೇಶ್**

ಸಹ ಪ್ರಾಧ್ಯಾಪಕರು, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು.

DOI: https://doi.org/10.5281/zenodo.17221686

## ABSTRACT:

ಜನಪದರ ಬದುಕಿನ ಬೇರಿನಿಂದ ಜನಪದ ಸಾಹಿತ್ಯ ಬೆಳವಣಿಗೆ ಕಂಡಿರುವಂತೆ ತತ್ವಪದಕಾರರೂ ಕೂಡ ಜನಪದ ಸಾಹಿತ್ಯದಿಂದಲೇ ಬೆಳೆದ ಕವಿಗಳು. ಅವರು ಆಧ್ಯಾತ್ಮಿಕ ಜೀವಿಗಳಷ್ಟೇ ಅಲ್ಲ, ಅನುಭಾವಿಗಳು ಹೌದು. ಆಧ್ಯಾತ್ಮವೇ ಜೀವಾಳವಾಗಿಸಿಕೊಂಡ ತತ್ವಪದಗಳ ಉಗಮ 12ನೇ ಶತಮಾನದಲ್ಲಿ ಆಯಿತು.

ತತ್ವಪದಕಾರರು ಒಂದೇ ಒಂದು ಮತಕ್ಕೆ ಸೀಮಿತವಾದವರಲ್ಲ. ಅವರ ತತ್ವಗಳು ಸಾಮಾಜಿಕಧಾರ್ಮಿಕ ಪರಿಕಲ್ಪನೆಗಳಾಗಿವೆ. ಅವರದು ವೈವಿಧ್ಯತೆಯಲ್ಲಿ ಏಕತೆಯನ್ನು ಮೂಡಿಸುವ ಮನೋಧರ್ಮವಾಗಿದೆ. ಸಮಾಜದಲ್ಲಿ ತುಂಬಿರುವ ಅಸಮಾನತೆಯ ಭಾವನೆಯನ್ನು ತೊಡೆದು ಹಾಕಲು ತತ್ವಪದಕಾರರು ಆಯ್ಕೆ ಮಾಡಿಕೊಂಡಿರುವ ಸಾಧನವೆಂದರೆ ಅದುವೇ ಆಧ್ಯಾತ್ಮಿಕತೆ. ಆಡು ಭಾಷೆಯನ್ನೇ ಬಳಸಿ ಅನೇಕ ತತ್ವಪದಗಳನ್ನು ರಚಿಸುವುದರ ಮೂಲಕ ಜನತೆಯಲ್ಲಿ ವೈಚಾರಿಕತೆಯ ಪ್ರಜ್ಞೆಯನ್ನು ಬಿತ್ತುವ ಪ್ರಯತ್ನ ಮಾಡಿದರು ಎಂದರೆ ತಪ್ಪಾಗಲಾರದು.

## KEYWORDS:

ತತ್ವಪದಕಾರರು, ಶಿಶುನಾಳ ಶರೀಫ, ಅನುಭಾವ ಸಾಹಿತ್ಯ, ಮಹಿಳಾ ತತ್ವಪದಕಾರರು, ಸೌಹಾರ್ದ.

**ಪೀಠಿಕೆ:**

ಜನಪದರ ಬದುಕಿನ ಬೇರಿನಿಂದ ಜನಪದ ಸಾಹಿತ್ಯ ಬೆಳವಣಿಗೆ ಕಂಡಿರುವಂತೆ ತತ್ವಪದಕಾರರೂ ಕೂಡ ಜನಪದ ಸಾಹಿತ್ಯದಿಂದಲೇ ಬೆಳೆದ ಕವಿಗಳು. ಅವರು ಆಧ್ಯಾತ್ಮಿಕ ಜೀವಿಗಳಷ್ಟೇ ಅಲ್ಲ, ಅನುಭಾವಿಗಳು ಹೌದು. ಆಧ್ಯಾತ್ಮವೇ ಜೀವಾಳವಾಗಿಸಿಕೊಂಡ ತತ್ವಪದಗಳ ಉಗಮ 12ನೇ ಶತಮಾನದಲ್ಲಿ ಆಯಿತು.

ತತ್ವಪದಕಾರರು ಒಂದೇ ಒಂದು ಮತಕ್ಕೆ ಸೀಮಿತವಾದವರಲ್ಲ. ಅವರ ತತ್ವಗಳು ಸಾಮಾಜಿಕಧಾರ್ಮಿಕ ಪರಿಕಲ್ಪನೆಗಳಾಗಿವೆ. ಅವರದು ವೈವಿಧ್ಯತೆಯಲ್ಲಿ ಏಕತೆಯನ್ನು ಮೂಡಿಸುವ ಮನೋಧರ್ಮವಾಗಿದೆ. ಸಮಾಜದಲ್ಲಿ ತುಂಬಿರುವ ಅಸಮಾನತೆಯ ಭಾವನೆಯನ್ನು ತೊಡೆದು ಹಾಕಲು ತತ್ವಪದಕಾರರು ಆಯ್ಕೆ ಮಾಡಿಕೊಂಡಿರುವ ಸಾಧನವೆಂದರೆ ಅದುವೇ ಆಧ್ಯಾತ್ಮಿಕತೆ. ಆಡು ಭಾಷೆಯನ್ನೇ ಬಳಸಿ ಅನೇಕ ತತ್ವಪದಗಳನ್ನು ರಚಿಸುವುದರ ಮೂಲಕ ಜನತೆಯಲ್ಲಿ ವೈಚಾರಿಕತೆಯ ಪ್ರಜ್ಞೆಯನ್ನು ಬಿತ್ತುವ ಪ್ರಯತ್ನ ಮಾಡಿದರು ಎಂದರೆ ತಪ್ಪಾಗಲಾರದು.

ತತ್ವಪದಕಾರರಲ್ಲಿ ತತ್ವಪದಕಾರ ಕಾಶೀನಾಥ ಪಂಚಶೀಲ ಗವಾಯಿಯವರು ವಿಶಿಷ್ಟವಾಗಿ ಗುರುತಿಸಿಕೊಂಡಿದ್ದಾರೆ. ತತ್ವಪದ ಸಾಹಿತ್ಯ ಪ್ರಕಾರವು ಜಾನಪದದ ಒಂದು ಸ್ವತಂತ್ರ ಭಾಗವಾಗಿ ಬೆಳೆದುಬಂದಿದೆ. ತತ್ವಪದಕಾರರು ತಾವು ಕಂಡುಂಡ ನೋವು, ನಲಿವು ಹಾಗೂ ಬದುಕಿನ ಹತಾಶೆಗಳನ್ನು ತಮ್ಮ ಅನುಭಾವಿಕ ದರ್ಶನದ ಮೂಲಕ ಪದಕಟ್ಟಿ ಹಾಡುತ್ತ ಬಂದಿದ್ದಾರೆ.

ಕನ್ನಡದ ಮೊದಲ ಕೃತಿ ಕವಿರಾಜ ಮಾರ್ಗದಲ್ಲಿಯೇ ಹಾಡುಗಬ್ಬಗಳ ಉಲ್ಲೇಖ ದೊರೆಯುತ್ತದೆ. ಆದರೆ ಇಂದು ನಾವು ತತ್ವಪದ ಎಂದು ಗುರುತಿಸಿಕೊಂಡು ಬರುತ್ತಿರುವ ಈ ಹಾಡುಗಬ್ಬ ರೂಪದ ಪ್ರಾರಂಭಿಕ ರೂಪಗಳನ್ನು, ವಚನಗಳನ್ನು ಬರೆದ 12ನೇ ಶತಮಾನದ ಶಿವಶರಣರಲ್ಲಿಯೇ ಕಾಣುತ್ತೇವೆ. ಬಸವಾದಿ ಶಿವಶರಣರು ವಚನಗಳೊಂದಿಗೆ ಪದಗಳನ್ನು ರಚಿಸಿದ್ದು ಇದೆ. ನೀಲಾಂಬಿಕೆಯ "ನೋಡು ನೋಡು ನೋಡು ಲಿಂಗವೇ । ನೋಡು ಬಸವಯ್ಯನವರು ಮಾಡಿದಾಟವಾ" ಎಂಬ ಗೀತೆಯೊಂದು ಜನಮಾನಸದಲ್ಲಿ ಅಚ್ಚೊತ್ತಿದೆ. ಆದಾಗ್ಯೂ ತತ್ವಪದ ಪ್ರಕಾರಕ್ಕೆ ಸುಗ್ಗಿ ಬಂದದ್ದು 17ನೇ ಶತಮಾನದಲ್ಲಿ ನಿಜಗುಣ ಶಿವಯೋಗಿಯ ಕಾಲಕ್ಕೆ. ಆರೂಢ ತಾತ್ವಿಕತೆಯ ಅನುಸಂಧಾನಿಗಳಾಗಿದ್ದ ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ' ಕೃತಿಯು ತತ್ವಪದ ಪ್ರಕಾರದಲ್ಲೊಂದು ಮೈಲಿಗಲ್ಲು. ಕರ್ನಾಟಕದಲ್ಲಿ ತತ್ವಪದ ಪರಂಪರೆಯು ಉಲ್ಲಾಸವಾಗಿ ಬೆಳೆದು ಬಂದಿರುವುದು ಉತ್ತರ ಕರ್ನಾಟಕದಲ್ಲಿ ಎಂದರೆ ತಪ್ಪಾಗಲಾರದು.

ತತ್ವಪದ ಕೇವಲ ಸಾಹಿತ್ಯ ರೂಪವಲ್ಲ. ಅದೊಂದು ಅನುಭಾವ ಜನ್ಯ

ಹೃತ್ಕಾವ್ಯ. ಅಲ್ಲಿ ಜನರ ಬದುಕು ಅನುರಣಿತವಾಗುತ್ತಿದೆ. ಆದ್ದರಿಂದಲೇ ಅದು ಗುರು ಪಂಥೀಯ ಮಾರ್ಗ. ಅಲ್ಲಿ ಕಲ್ಪಿತ ದೇವರಿಲ್ಲ. ಗುರುವೇ ದೇವ, ಧರ್ಮ, ದಾತಾ ಎಲ್ಲ. ಗುರು ಮುಟ್ಟಿ ಗುರುವಾಗುವ ಪ್ರಾಯೋಗಿಕ ದಾರಿ. ಮನುಷ್ಯ ನಿರ್ಮಿತ ಎಲ್ಲ ಬೇಲಿ ಭ್ರಮೆಗಳನ್ನು, ಲೌಕಿಕ ರಚನೆಗಳನ್ನು ಮೀರಿ ಸುಮ್ಮನೆ ಸಹಜವಾಗಿ ಬಾಳಿ ಬಯಲಾಗುವ ಪರಿಯನ್ನು ಎಲ್ಲ ತತ್ವಪದಕಾರರು ಸರಳವಾಗಿ ತೋರಿಸಿಕೊಟ್ಟಿದ್ದಾರೆ. ಬ್ರಾಹ್ಮಣ ಗೋವಿಂದ ಭಟ್ಟನಿಗೆ ಶಿಶುನಾಳ ಶರೀಫ ಶಿಷ್ಯನಾದರೆ ಶರೀಫಜ್ಜರಿಗೆ ಎಲ್ಲ ಕುಲಬಾಂಧವರು ಶಿಷ್ಯರಾಗಿದ್ದಾರೆ. ಜಾತಿ ಮೀರಿ ಹುಟ್ಟಿದ ಕಡಕೋಳ ಮಡಿವಾಳಪ್ಪನಿಗೆ ಬ್ರಾಹ್ಮಣ ಖೈನೂರು ಕೃಷ್ಣಪ್ಪ ಶಿಷ್ಯ. ಈತನ ಶಿಷ್ಯಳು ಕಂಬಾರ ರಾಚವ್ವ. ಬಣಜಿಗ ಕೂಡಲೂರು ಬಸಲಿಂಗಪ್ಪನಿಗೆ ಮುಸ್ಲಿಂ ಜಲಾಲ ಸಾಹೇಬ ಶಿಷ್ಯ. ಈತನ ಶಿಷ್ಯ ಗಂಗಾಮತಸ್ಥ ಮೋತಕಪಳ್ಳಿ ಭೀಮರಾಯ. ನೇಕಾರ ನಿಂಬರಗಿ ಮಹಾರಾಜರ ಶಿಷ್ಯ ಬ್ರಾಹ್ಮಣ ಬಾವುಸಾಹೇಬ ಮಹಾರಾಜ. ಇವರ ಶಿಷ್ಯೆ ಐಗೋಳ ಕುಲದ ಶಿವಲಿಂಗವ್ವ ಜತ್ತ. ರಾಯಚೂರಿನ ಹನುಮಂತವ್ವ ಕೋಮಟಿ. ಅವಳ ಶಿಷ್ಯರಲ್ಲಿ ದಲಿತರಾದಿಯಾಗಿ ಎಲ್ಲ ಕುಲದವರಿದ್ದಾರೆ. ಈ ಪರಂಪರೆ ದೀರ್ಘವಾಗಿದೆ.

ತತ್ವಪದಗಳು ನಮ್ಮ ಅಂತರಂಗವನ್ನು ತೋರಿಸುವ ಮೂಲಕ ಅಸ್ಮಿತೆಯ ಅರಿವು ಮೂಡಿಸುತ್ತವೆ. ತಾತ್ವಿಕ ದೃಷ್ಟಿಯಿಂದಲೇ ಜೀವನದ ರಹಸ್ಯಗಳನ್ನು ಭೇದಿಸಲು ತತ್ವಪದಗಳು ಪ್ರೇರೇಪಿಸುತ್ತವೆ. ತತ್ವಪದಕಾರರ ಮಾರ್ಗ ಭಕ್ತಿ ಪಥವೂ ಅಲ್ಲ, ದೈವ ಪಥವೂ ಅಲ್ಲ, ಆಧ್ಯಾತ್ಮವೂ ಅಲ್ಲ. ಜಾತಿಧರ್ಮದಂತಹ ಸೀಮಿತ ಹಂಗುಗಳನ್ನು ಮೀರಿದ ಬದುಕಿನ ಚಿಂತನಾ ಕ್ರಮವಾಗಿದೆ. ಭಾರತೀಯ ಸಾಹಿತ್ಯದಲ್ಲಿ ತತ್ವ ಪದಗಳ ಹಾಗೂ ತತ್ವಪದಕಾರರ ಬಹುದೊಡ್ಡ ಪರಂಪರೆ ಇದೆ. ಅದು ಸಾಂಸ್ಕೃತಿಕ ಸಿರಿವಂತಿಕೆಯಿಂದ ಸಮೃದ್ಧವಾಗಿದೆ.

**ಶಿಶುನಾಳ ಶರೀಫ:**

ಶರೀಫರ 'ಹಾಕಿದ ಜನಿವಾರವ' ಎಂಬ ತತ್ವಪದ ಜಾತ್ಯತೀತ ಗುರುಶಿಷ್ಯ ಸಂಬಂಧದ ಮೂಲಕ ಸಾಮರಸ್ಯವನ್ನು ಪ್ರತಿಪಾದಿಸುತ್ತದೆ. ಶರೀಫರ ಪದದಲ್ಲಿ ಜನಿವಾರ ತೊಡಿಸಿ, ಮಂತ್ರಬೋಧೆ ಮಾಡುವವ ತಂದೆಯಲ್ಲ, ಗುರು. ಗುರುಶಿಷ್ಯ ಸಂಬಂಧ ಜಾತಿ, ಕುಲ, ಗೋತ್ರ, ಭಾವಗಳಿಗೂ ಅತೀತವಾದದ್ದು. ಕೈವಾರ ತಾತಯ್ಯನವರ 'ಈ ಊರೊಳಗಿಷ್ಟು ಉತ್ಪಾತವೇನೋ' ಎಂಬ ಪದವು ಆರ್ಥಿಕತೆಭಕ್ತಿ ಅನುಭಾವಗಳ ಸಂಬಂಧವನ್ನು ಹಿಂಸೆಯ ನೆಲೆಯಲ್ಲಿ ಚರ್ಚಿಸುತ್ತದೆ.

ಶಿಶುನಾಳ ಶರೀಫರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಶಿಶುವಿನಾಳ ಗ್ರಾಮದಲ್ಲಿ ಕ್ರಿ.ಶ. 1819 ಜುಲೈ 3ರಂದು ಜನಿಸಿದರು. ಇವರ ತಂದೆ ದೇವಕಾರ ಮನೆತನದ ಇಮಾಮ ಹಜರತ ಸಾಹೇಬರು ಹಾಗು ತಾಯಿ ಹಜ್ಜೂಮಾ. ಇವರ

ಪೂರ್ಣ ಹೆಸರು ಮಹಮ್ಮದ ಶರೀಫ. ಮುಲ್ಕಿ ಪರೀಕ್ಷೆ ಪಾಸು ಮಾಡಿದ ಬಳಿಕ ಶರೀಫರು ಕೆಲ ಕಾಲ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಾರೆ. ಆದರೆ ಮುಂದೆ ಈ ಕೆಲಸವನ್ನು ಬಿಟ್ಟುಬಿಟ್ಟರು. ಈ ಸಮಯದಲ್ಲಿ ಶರೀಫರಿಗೆ ಕಳಸದ ಗುರು ಗೋವಿಂದಭಟ್ಟರಿಂದ ಅನುಗ್ರಹವಾಯಿತು. ಮಗನು ಕೆಲಸವನ್ನು ಬಿಟ್ಟು ಆಧ್ಯಾತ್ಮಿಕ ಚಿಂತನೆಯಲ್ಲಿ ತೊಡಗಿಸಿಕೊಂಡದ್ದರಿಂದ ಶರೀಫರ ತಂದೆತಾಯಿ ಅವರಿಗೆ ಕುಂದಗೋಳ ನಾಯಕ ಮನೆತನದ ಫಾತಿಮಾ ಎಂಬ ಕನ್ಯೆಯೊಂದಿಗೆ ಮದುವೆ ಮಾಡುತ್ತಾರೆ.

ಶರೀಫರಿಗೆ ಗೋವಿಂದಭಟ್ಟ ಎಂಬ ಗುರುವಿನಲ್ಲಿ ಸರಿಯಾದ ಮಾರ್ಗದರ್ಶನ ದೊರೆಯುತ್ತದೆ. ಯಾವುದೇ ಮತದ ಬಗ್ಗೆ ಮೂಢನಂಬಿಕೆ ಇಲ್ಲದ ಈ ಗುರುಗಳು ಶರೀಫರಿಗೆ ತುಂಬಾ ಮೆಚ್ಚುಗೆಯಾಗುತ್ತಾರೆ. ಗುರುಶಿಷ್ಯರಿಬ್ಬರೂ ಮಸೀದಿಗಳಿಗೆ, ದೇವಾಲಯಗಳಿಗೆ ಸಂದರ್ಶನಕ್ಕಾಗಿ ಭೇಟಿಕೊಡುತ್ತಾರೆ. ಶರೀಫರು ಅನೇಕ ಹಾಡುಗಳನ್ನು ರಚಿಸಿ ಹಾಡುತ್ತಾರೆ. ಈ ಗುರುಗಳ ಜೊತೆಗೆ ನವಲಗುಂದದ ನಾಗಲಿಂಗಮತಿ ಮತ್ತು ಗರಗದ ಮಡಿವಾಳಪ್ಪ ಎಂಬುವರೂ ಸಹ ಶರೀಫರ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರುತ್ತಾರೆ.

ಶರೀಫರು ಹಾಡಿದ ಪದಗಳು ಧಾರವಾಡ ಜಿಲ್ಲೆಯ ಆಡುಭಾಷೆಯ ಶೈಲಿಯಲ್ಲಿರುವುದನ್ನು ಗಮನಿಸಬಹುದು. ಈ ಪದಗಳಲ್ಲಿ ಕೆಲವು ದೇವತಾ ಸ್ತುತಿಯ ಪದಗಳಾದರೆ, ಇನ್ನು ಕೆಲವು ಪದಗಳು ತತ್ವಬೋಧನೆಯ ಪದಗಳಾಗಿವೆ. ಹೆಚ್ಚಿನ ಪದಗಳು ಕನ್ನಡದಲ್ಲಿ ಇದ್ದರೂ ಸಹ ಕೆಲವು ತತ್ವಪದಗಳು ಉರ್ದು ಭಾಷೆಯಲ್ಲಿಯೂ ಇವೆ.

ಹೊಸಗನ್ನಡ ಅರುಣೋದಯ ಸಾಹಿತ್ಯದ ಮುಂಬೆಳಗಿನ ಕಾಲದಲ್ಲಿ ತಮ್ಮ ಅನುಭಾವ ಕಾವ್ಯದ ಹೊಂಗಿರಣವೊಂದನ್ನು ಹಾಯಿಸಿದ ಪ್ರಸಿದ್ಧ ಅನುಭಾವಿ ಕವಿ, ಅಭಿಜಾತ ಕಲಾವಿದರಾಗಿದ್ದ ಶಿಶುನಾಳರು ಚಿಕ್ಕಂದಿನಲ್ಲಿಯೇ ಹಳ್ಳಿಯ ಜಾತ್ರೆ, ಉತ್ಸವಗಳಲ್ಲಿ ಶರಣರ ವಚನಗಳನ್ನೂ, ಅನುಭಾವ ಪದಗಳನ್ನೂ ಹಾಡುತ್ತ, ಬಹುರೂಪಿಗಳ ಹಾಗೆ ವಿವಿಧ ವೇಷ ಹಾಕುತ್ತ, ಬಗೆಬಗೆಯ ಬಯಲಾಟಗಳಲ್ಲಿ ಪಾತ್ರವಹಿಸುತ್ತ ತಮ್ಮ ಕಲೆಗಾರಿಕೆಯನ್ನು ಜನಮನದ ವಿಲಾಸವಿಕಾಸಗಳಿಗೆ ಮುಡಿಪಾಗಿಡಲು ಮೊದಲು ಮಾಡಿದರು. ಮೊಹರಂ ಪರ್ವ ಸಮಯದಲ್ಲಿ ತಲೆ ಎತ್ತುವ ಕರ್ಬಲಾ ಮೇಳಗಳಿಗಾಗಿ ದಿವಾಯತ್ ಪದ ರಚಿಸಿಕೊಡುತ್ತಿದ್ದರು, ಲಾವಣಿಗಳನ್ನೂ ಬರೆಯುತ್ತಿದ್ದರು. ಹೀಗೆ ನಿಧಾನವಾಗಿ ಸಾಹಿತ್ಯಪಥದಲ್ಲಿ ತಮ್ಮ ಹೆಜ್ಜೆ ಮೂಡಿಸಿ, ಮುಂದಿನ ಸೃಷ್ಟಿಗೆ ಅಗತ್ಯವಾದ ಪೂರ್ವಸಿದ್ಧತೆ ಮಾಡಿಕೊಂಡರು. ಕಳಸದ ಗುರುಗೋವಿಂದ ಭಟ್ಟರು, ಅಂಕಲಗಿಯ ಅಡವಿ ಸ್ವಾಮಿಗಳು, ಗರಗದ

ಮಡಿವಾಳಪ್ಪನವರು, ನವಿಲುಗುಂದದ ನಾಗಲಿಂಗಪ್ಪನವರು, ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿಗಳು ಮುಂತಾದ ಸಮಕಾಲೀನ ಸಾಧುಸತ್ಪುರುಷರ ಸಾನ್ನಿಧ್ಯ, ಸಂಸರ್ಗಗಳಿಂದ ಅನುಭಾವಿಯಾಗಿ ಮಾಗಿದ್ದಾರೆ ಎನ್ನಬಹುದು.

**ಮೋಟ್ನಳ್ಳಿ ಹಸನ್‌ಸಾಹೇಬರವರು:**

ಮೋಟ್ನಳ್ಳಿ ಹಸನ್‌ಸಾಹೇಬ 'ಅಲ್ಲಲ್ಲಾ ಇಲ್ಲಿಲ್ಲಾ ಶಿವನಿಲ್ಲಿಲ್ಲ, ಶಿವನೆಲ್ಲಿಲ್ಲಾ? ನಿನ್ನ ನೀ ತಿಳಿ ನೀನೇ ಪರಬ್ರಹ್ಮನಲ್ಲಾ?' ಎಂಬ ತತ್ವಪದದಲ್ಲಿ ಮುಖ್ಯವಾಗಿ ವೈದಿಕ, ವೀರಶೈವ ಹಾಗೂ ಮುಸ್ಲಿಂ ಧರ್ಮಗಳ ಜಡ ಆಚರಣೆಗಳನ್ನು ನಿರಾಕರಿಸುತ್ತಾನೆ. ಇವುಗಳಿಗೆ ಪರ್ಯಾಯವಾಗಿ ಹಸನ್‌ಸಾಹೇಬ ಯೋಗಮಾರ್ಗವನ್ನು ಸೂಚಿಸಿದ್ದಾರೆ.

**ಕಡಕೋಳ ಮಡಿವಾಳಪ್ಪ:**

ಕಡಕೋಳ ಮಡಿವಾಳಪ್ಪನವರ 'ಶರಣಾರ್ಥಿ' ಎಂಬ ತತ್ವಪದವು ತತ್ವಪದಕಾರರ ಧಾರ್ಮಿಕ ಸೌಹಾರ್ದ ಪರಿಕಲ್ಪನೆಯ ಸ್ವರೂಪವನ್ನು ಹಾಗೂ ಅದರ ಹಿಂದಿರುವ ತಾತ್ವಿಕ ವಿನ್ಯಾಸಗಳನ್ನು ಖಚಿತವಾಗಿ ನಿರೂಪಿಸುತ್ತದೆ.

**'ಹಲವು ನಾಮರಿಗೆ ಹಲವು ರೂಪರಿಗೆ ಹಲವು ಕ್ರಿಯೆಯರಿಗೆ ಶರಣಾರ್ಥಿ**
**ಹಲವು ಜಾಣರಿಗೆ ಹಲವು ಮುಗ್ಧರಿಗೆ ಹಲವು ಛಲರಿಗೆ ಶರಣಾರ್ಥಿ'**

ಸ್ಥಾಪಿತ ಧರ್ಮಗಳು ಜಡಗೊಂಡು ಆಂತರಿಕವಾಗಿ ಪುರೋಹಿತಶಾಹಿ ಮತ್ತು ಮೌಢ್ಯಗಳನ್ನು ಬೆಳೆಸಿ ಜನ ಸಮುದಾಯವನ್ನು ಶೋಷಿಸುತ್ತಿದ್ದವು ಹಾಗೂ ಜಡಗೊಂಡ ಧರ್ಮಗಳು ಪರಸ್ಪರ ದ್ವೇಷದ ಕಾರಣದಿಂದ ಧಾರ್ಮಿಕ ಹಿಂಸೆಗೆ ವೇದಿಕೆಯಾಗುತ್ತಿದ್ದವು. ಈ ಬಗೆಯ ಧಾರ್ಮಿಕ ಹಿಂಸೆಗೆ ಪರ್ಯಾಯವಾಗಿ ಎಲ್ಲ ಧರ್ಮ, ಜಾತಿ, ಜನಸಮುದಾಯಗಳು ಸೌಹಾರ್ದದಿಂದ ಬದುಕು ರೂಪಿಸಿಕೊಳ್ಳಬೇಕೆಂದು ಸಾಮರಸ್ಯದ ತಾತ್ವಿಕತೆಯನ್ನು ಪ್ರತಿಪಾದಿಸಲಾಗಿದೆ.

**ಶಿವಲಿಂಗಮ್ಮ ಜತ್ತಿ:**

ಶಿವಲಿಂಗಮ್ಮ ಜತ್ತಿಯವರ 'ಮಗಾ ಹುಟ್ಟಿತವ್ವ ಎನಗೊಬ್ಬ ಮಗಾ ಹುಟ್ಟಿತವ್ವ' ಎಂಬ ತತ್ವಪದ ಸ್ತ್ರೀ ಕೂಡ ಅನುಭಾವದಲ್ಲಿ ಪಾಲುದಾರಳಾಗಿ ಧಾರ್ಮಿಕ ಅಸಮಾನತೆಯ ಹಿಂಸೆಯಿಂದ ಮುಕ್ತಿ ಪಡೆದ ಸುಳಿವನ್ನು ಸಂಭ್ರಮದಿಂದ ದಾಖಲಿಸುತ್ತದೆ. ವಚನಕಾರ್ತಿಯರಿಗೆ ಅನುಭವ ಮಂಟಪ ಸಿಕ್ಕಂಥ ಸಂಭ್ರಮವದು. ಅನುಭಾವದ ಐದು ನೆಲೆಗಳನ್ನು ಈ ತತ್ವಪದಗಳು ವಿವರಿಸುತ್ತವೆ.

ಉತ್ತರ ಕರ್ನಾಟಕವು ಅನೇಕ ಸಂತರನ್ನು ಪಡೆದ ಪುಣ್ಯಕ್ಷೇತ್ರ. ಹುಬ್ಬಳ್ಳಿಯ ಸಿದ್ಧಾರೂಢರು, ನವಲಗುಂದದ ನಾಗಲಿಂಗಜ್ಜ, ಅಥಣಿಯ ಮುರುಘೇಂದ್ರರು,

ಅಗಡಿ ಶೇಷಾಚಲಸ್ವಾಮಿಗಳು, ತಿಂಥಿಣಿ ಮೋನೇಶ್ವರರು, ಕಡಕೋಳ ಮಡಿವಾಳಪ್ಪ ಮುಂತಾದವರು ಜನಮಾನಸದಲ್ಲಿ ಬೆರೆತು ಹೋಗಿದ್ದಾರೆ. ಜಾತಿ, ಧರ್ಮಗಳನ್ನು ಬದಿಗೊತ್ತಿ 'ಸೋಹಂತತ್ತ್ವ'ವನ್ನು ಹಿಡಿದು ಕೆಲವರು ನಡೆದರೆ; ಇನ್ನೂ ಕೆಲವರು 'ದಾಸೋಹಂ' ಭಾವದಲ್ಲಿ ನಡೆದಿದ್ದಾರೆ. ಇವರೆಲ್ಲರೂ 'ಆತ್ಮತತ್ತ್ವ'ವನ್ನು ಹಿಡಿದು ನಡೆದವರೇ. ಅಲ್ಲಮಪ್ರಭು ಹೇಳಿದ 'ತನ್ನ ತಾನರಿದಡೆ ತನ್ನರಿವೇ ಗುರು' ಎಂಬ ಮಹಾಸೂತ್ರವನ್ನು ಇಲ್ಲಿಯ ನೂರಾರು ಸಂತರು ಬಿಡದೆ ಧ್ಯಾನಿಸಿದ್ದಾರೆ.

ಗುರುಗೋವಿಂದರು ಉಪನಿಷತ್ತುಗಳ ಸಾರವನ್ನು ಶರೀಫರಿಗೆ ತಿಳಿಸಿಕೊಟ್ಟರು. 'ಬ್ರಹ್ಮ ಒಂದೇ, ಬ್ರಹ್ಮಾನಂದ ಒಂದೇ', 'ಬ್ರಹ್ಮಾನಂದದಿ ಮುಣಗ್ಯಾಡ್ವುದು ನೋಡು', 'ಬಾಯಿಲೇ ಬ್ರಹ್ಮವ' ಇವೇ ಮುಂತಾದ ತತ್ವಪದಗಳಲ್ಲಿ ಉಪನಿಷತ್ತು ಸಾರುವ 'ಅಯಮಾತ್ಮಾ ಬ್ರಹ್ಮ', 'ಅಹಂ ಬ್ರಹ್ಮಾಸ್ಮಿ' ಎಂಬ ಸೂತ್ರರೂಪಿ ಮಾತುಗಳ ವಿಸ್ತರಣೆಗಳನ್ನು ನಾವು ಕಾಣಬಹುದು. ಶರೀಫರು ಆತ್ಮಧ್ಯಾನದಲ್ಲಿ ತೊಡಗಿದರು; ಬ್ರಹ್ಮಧ್ಯಾನದಲ್ಲಿ ಲೀನರಾಗತೊಡಗಿದರು. ಶರೀಫರ ತಂದೆತಾಯಿಗಳು ಮಗ ಹೀಗೆ ಅಲೆದಾಡುತ್ತಿರುವುದಕ್ಕೆ ಮದುವೆಯೇ ಸರಿಯಾದ ಮದ್ದೆಂದು ತಿಳಿದು ಕುಂದಗೋಳದ ನಾಯಕ ಮನೆತನಕ್ಕೆ ಸೇರಿದ ಫಾತಿಮಾ ಎಂಬಾಕೆಯೊಡನೆ ನಿಕಾಹ್ ನೆರವೇರಿಸಿದರು. ಶರೀಫರ ಮದುವೆಗೆ ಗೋವಿಂದ ಭಟ್ಟರು ಹಸಿರು ನಿಶಾನೆ ತೋರಿಸಿದರು. ಸ್ವತಃ ತಾಯಿತಂದೆಯರನ್ನು ಮಕ್ಕಾಮದೀನ ಸ್ವರೂಪರೆಂದು ತಿಳಿದಿದ್ದರಿಂದ ಮದುವೆ ಯಾವ ಅಡ್ಡಿಆತಂಕಗಳೂ ಇಲ್ಲದೆ ನಡೆಯಿತು. ಶರೀಫರ ಬಾಳಿನಲ್ಲಿ ಫಾತಿಮಾ 'ಚಂದ್ರಮ್ಮಾ' ಆಗಿ ಬಂದಳು. ಶರೀಫರೂ ಕೂಡ ಜಾಣ ಸಂಸಾರಿಗನಾಗಿ ಬಾಳಿದರು; ಹೆಂಡತಿಯನ್ನು ಬಲು ಗೌರವಯುತವಾಗಿ ನಡೆಸಿಕೊಂಡರು. ಅವರೊಂದು ತತ್ವಪದದಲ್ಲಿ 'ತಕ್ಕವಳೆನಿಸಿದಿ ನನ್ನ ಹೆಂಡ್ತಿ' ಎಂದು ಹೇಳಿಕೊಂಡಿದ್ದಾರೆ. ಅವರ ದಾಂಪತ್ಯದ ಬಾಳಿನಲ್ಲಿ ಹೆಣ್ಣು ಕೂಸು ಬೆಳ್ದಿಂಗಳಂತೆ ಜನ್ಮಿಸಿತು. ಅದರ ಹೆಸರು ಲತೀಮಾ. ಶರೀಫರು ಮಡದಿಮಕ್ಕಳ ವ್ಯಾಮೋಹಕ್ಕೊಳಗಾಗದೆ, ಪ್ರಾಪಂಚಿಕ ವಿಷಯಗಳಲ್ಲಿ ಕುಂಬಾರಹುಳುವಿನಂತೆ ವ್ಯವಹರಿಸುತ್ತಿದ್ದರು. ಈ ನಡುವೆ ಹುಟ್ಟಿದ ಹೆಣ್ಣು ಮಗು ಕೆಲ ದಿನಗಳಲ್ಲಿ ತೀರಿಕೊಂಡಿತು. ತವರು ಮನೆಗೆ ಹೋಗಿದ್ದ ಫಾತಿಮಾ ಕೂಡ ಅಲ್ಲಿಯೇ ತೀರಿಕೊಂಡಳು. ಮಾವ ಅಂತ್ಯಕ್ರಿಯೆಗೆ ಬರಬೇಕೆಂದಾಗ 'ಮೋಹದ ಹೆಂಡತಿ ತೀರಿದ ಬಳಿಕ । ಮಾವನ ಮನೆಯ ಹಂಗಿನ್ಯಾಕೋ' ಎಂದು ಹೇಳಿ ಪ್ರಪಂಚದ ಹಂಗನ್ನು ತೊರೆದು ಸ್ವತಂತ್ರರಾದರು.

ಶರೀಫರು ಮಗಳು, ಮಡದಿ, ತಾಯಿತಂದೆ, ಕೊನೆಗೆ ಗುರು ಗೋವಿಂದ ಭಟ್ಟರನ್ನು ಕಳೆದುಕೊಂಡ ಮೇಲೆ ಸಹಜವಾಗಿ ಅವರ ಚಿತ್ತ ಕದಡಿತು. ಅವರು ಮನಶ್ಶಾಂತಿಗಾಗಿ ಕ್ಷೇತ್ರದರ್ಶನ ಪಡೆಯಲು ಹೊರಟರು. ಅವರು ಶಿರಹಟ್ಟಿ ಫಕೀರಸ್ವಾಮಿಗಳನ್ನು ಕಂಡು ಮಂಗಳ ಹಾಡಿದರು. ಅಲ್ಲಿಂದ ಮೈಲಾರ ಮಹದೇವನಲ್ಲಿ

ಬಂದು ಶರಣಾದರು. ಅನಂತರ ಸವದತ್ತಿಗೆ ಬಂದು ಏಳುಕೊಳ್ಳದ ಎಲ್ಲಮ್ಮನ ದರ್ಶನ ಪಡೆದು; ಚೆನ್ನಬಸವಣ್ಣನ ತಾಣವಾದ ಉಳವಿಗೆ ಬಂದರು. ಅವರ ಹಾಡುಗಳಲ್ಲಿ ನಲವತ್ತಾರಕ್ಕೂ ಹೆಚ್ಚು ಊರುಗಳ ಪ್ರಸ್ತಾಪವುಂಟು. ಶರೀಫರು ಸಂಚಾರ ಕಾಲದಲ್ಲಿ ಚಿದಂಬರ ದೀಕ್ಷಿತರು, ಬಾಲಲೀಲಾ ಮಹಾಂತ ಶಿವಯೋಗಿ, ಗುಡಗೇರಿಯ ಸಂಗಮೇಶ್ವರರು, ಅಂಕಲಗಿ ಅಡವಿಸ್ವಾಮಿಗಳು, ಗದುಗಿನ ಶಿವಾನಂದರು, ಅವರಾದಿ ಫಲಾಹಾರ ಸ್ವಾಮಿಗಳು, ಇನ್ನೂ ಹಲವು ಸಾಧುಸಂತರನ್ನು ಕಂಡರು. ಇವರೆಲ್ಲರೂ ಒಂದಲ್ಲ ಒಂದು ರೀತಿ ಶರೀಫರ ಮೇಲೆ ಪ್ರಭಾವವನ್ನು ಬೀರಿದವರೇ.

ಶರೀಫರು ನವಲಗುಂದದ ನಾಗಲಿಂಗಯತಿಗಳೊಡನೆ ಬಲು ಮೋಜಿನಿಂದ ವ್ಯವಹರಿಸುತ್ತಿದ್ದರು. ಅವರಿಬ್ಬರಲ್ಲಿ ಆತ್ಮೀಯ ಸಖ್ಯವಿತ್ತು. ಒಮ್ಮೆ ನಾಗಲಿಂಗಾವಧೂತರು ಶರೀಫರನ್ನು ಕಾಣಲು ಶಿಶುನಾಳಕ್ಕೆ ಹೋದರು. 'ಶರೀಪನಿರುವದೆಲ್ಲಿ?' ಎಂದಾಗ ಅವರ ಎದುರಿಗೆ ಶರೀಫರೇ ಬಂದರು. ಪಲ್ಲಕ್ಕಿ ಏರಿ ಬರುತ್ತಿರುವ ನಾಗಲಿಂಗಯತಿಗಳನ್ನು ಶರೀಫರು ಭೇಡಿಸಿದರು. ಇಬ್ಬರಿಗೂ ವಾಗ್ವಾದ ಆಯಿತು. ನಂತರ 'ಬಗಳಮುಖಿಯ ಮಗನ ಕೂಡಾ ರಗಳೆಯಾತಕೆ' ಎಂದು ನಾಗಲಿಂಗಯತಿಗಳನ್ನು ಕೊಂಡಾಡಿದರು. ಸಿದ್ಧಾರೂಢರು ಶರೀಫರಿಗಿಂತ ಚಿಕ್ಕವರಷ್ಟೆ? ಒಮ್ಮೆ ಹುಬ್ಬಳ್ಳಿಗೆ ಬಂದು ಸಿದ್ಧಾರೂಢರನ್ನು ಕಂಡು, 'ಆರೂಢ, ಈರೂಢ, ಪ್ರಭು ಆಡೋ ನಿರಂಜನ... ಭಂಗರಹಿತ ಪರತತ್ತ್ವದ ಇಂಗಿತ ತಿಳಿದವನೇ ಆರೂಢಾ' ಎಂದು ಹೇಳಿ ಆರೂಢದ ದಾರಿ ಮತ್ತು ಏರುವ ಕ್ರಮ ಕಠಿಣವೆಂದು ತಿಳಿಸಿಅಧ್ಯಾತ್ಮತತ್ತ್ವದ ಗಹನತೆಯನ್ನು ಸಿದ್ಧಾರೂಢರಿಗೆ ಮನವರಿಕೆ ಮಾಡಿಕೊಟ್ಟರು.

ಶರೀಫರು ವರಕವಿ, ಆದರೆ, ಲೋಕದ ಬಾಳುವೆ ಬಂಗಾರವೇನೂ ಆಗಿರಲಿಲ್ಲ. ಬಡತನ ಬೆನ್ನನ್ನು ಹತ್ತುತ್ತಲೇ ಇತ್ತು. ಒಂದು ಘಟ್ಟದಲ್ಲಿ ಅವರಿಗೆ ತುತ್ತು ಅನ್ನ ಸಿಗದೆ ಹೋಯಿತು. ಶರೀಫರು ಹಲವು ಪ್ರಕಾರಗಳಲ್ಲಿ ಪದ್ಯಗಳನ್ನು ರಚಿಸಿದರು. ಅವರ ಕಾವ್ಯ ವೈವಿಧ್ಯಮಯವಾದುದು. ಅವರು ತತ್ವಪದಗಳನ್ನು ಹಾಡಿದರು. ದಂಡಕಗಳನ್ನು ಹೇಳಿ ದೇವದೇವಿಯರನ್ನು ಸ್ತುತಿಸಿದರು. ಕಾಲಜ್ಞಾನವನ್ನು ಹೇಳಿ ಜನರನ್ನು ಎಚ್ಚರಿಸಿದರು. ಲಾವಣಿಗಳನ್ನು ಹಾಡಿ ನೀತಿಬೋಧೆಯನ್ನು ಹೇಳಿದರು. ಹೋಳಿ ಹಾಡುಗಳ ಮೂಲಕ ಚರಿತ್ರೆಯನ್ನು ವಿವರಿಸಿದರು. ಅವರು ರಚಿಸಿದ ದಿವಾಯತ್ ಹೆಜ್ಜೆ ಮೇಳಕ್ಕೆ ಸೊಬಗನ್ನು ನೀಡಿದುವು. ಮಂಗಳಾರತಿ ಪದಗಳನ್ನು ರಚಿಸಿಜನತೆಗೂ ದೈವಕ್ಕೂ ಮಂಗಳವನ್ನು ಹೇಳಿದರು. ಶರೀಫರು ಜೀವನದ ನಿತ್ಯಘಟನೆಗಳನ್ನೇ ವಸ್ತುವಾಗಿ ಆರಿಸಿಕೊಂಡು ಅಧ್ಯಾತ್ಮ ನಡೆಯ ಮಾರ್ಗಗಳನ್ನು ನಿರೂಪಿಸಿದರು. ಶರೀಫರು ಚಿಕ್ಕಂದಿನಲ್ಲಿ ಆ ಊರಿನ ಹಿರೇಮಠದ ಸಿದ್ಧರಾಮಯ್ಯ ಎಂಬ ವೀರಶೈವ ಪಂಡಿತರಿಂದ ವೀರಶೈವಧರ್ಮದ ಮರ್ಮವನ್ನು ತಿಳಿದರು. ಅವರು ಬಸವಣ್ಣ ಮತ್ತು ಅಲ್ಲಮಪ್ರಭುಗಳ ವಚನಗಳಿಗೆ ಮಾರುಹೋಗಿದ್ದರು. ಅವರೊಂದು ಕಡೆ

'ಬಸವಣ್ಣನಂಥ ಭಕ್ತನಿಲ್ಲ; ಪ್ರಭುದೇವರಂಥ ಪರಮಾತ್ಮನಿಲ್ಲ' ಎಂದು ಮನದುಂಬಿ ಹಾಡಿದ್ದಾರೆ. 'ಮಣ್ಣುಬಿಟ್ಟು ಮಡಕೆಯಿಲ್ಲ; ತನ್ನ ಬಿಟ್ಟು ದೇವರಿಲ್ಲ' ಎಂದು ಬಲು ಸೂಕ್ಷ್ಮವಾಗಿ ಅದ್ವೈತದ ಪ್ರಮೇಯವನ್ನು ತಿಳಿಸಿದ್ದಾರೆ. ಭಕ್ತಿಯಿಂದ ಜ್ಞಾನ, ಜ್ಞಾನದಿಂದ ವಿರಕ್ತಿ, ವಿರಕ್ತಿಯಿಂದ ಮುಕ್ತಿ ಎಂದು ಸಾರಿದ್ದಾರೆ. ಅವರು ತಮ್ಮ ಹಾಡುಗಳಿಗೆ 'ಶಿಶುನಾಳಧೀಶ' ಎಂಬ ಅಂಕಿತವನ್ನು ನೀಡಿದ್ದಾರೆ.

ಶರೀಫರು ದೈವಭಕ್ತ, ಸಂತ, ಜ್ಞಾನಿ, ಕವಿ, ಸಮಾಜ ಸುಧಾರಕ, ವಿಚಾರವಾದಿ ಇವೆಲ್ಲ ಮುಖವೂ ಅವರು ರಚಿಸಿದ ಕೃತಿಗಳಿಂದ ನಮಗೆ ಕಾಣಬರುತ್ತದೆ. ಅವರು ಭಕ್ತಿ ಸಾಧನೆಯೇ ಜೀವನದ ಏಕಮಾತ್ರ ಉದ್ದೇಶವೆಂದು ತಿಳಿದಿದ್ದರು. ಎಲ್ಲಾ ಪಂಥಗಳು ಹೇಳುವುದು 'ಬ್ರಹ್ಮತತ್ತ್ವ'ವೆಂದು ಅನುಭವದಿಂದಲೇ ಮನಗಂಡಿದ್ದರು. ಆ ಮೂಲಕ ಪರಮಾರ್ಥ ಸಾಧನೆಯ ಹಾದಿಯನ್ನು ಎಲ್ಲರಿಗೂ ತೋರಿಸಿದರು. ಲೋಕದಲ್ಲಿ ನಡೆಯುತ್ತಿದ್ದ ಅನೀತಿ, ಮೋಸ, ವಂಚನೆ, ಕಪಟತನ, ಬಾಹ್ಯಾಡಂಬರ, ಅಂಧಶ್ರದ್ಧೆ, ಶೋಷಣೆ, ಇವುಗಳನ್ನು ಕಂಡು ಕಟುವಾಗಿ ವಿರೋಧಿಸಿದರು. ಉಚ್ಚನೀಚ, ಕುಲಗೋತ್ರ ಇತ್ಯಾದಿ ಎಲ್ಲಾ ಬಗೆಯ ಭೇದಗಳನ್ನು ತ್ಯಜಿಸಬೇಕೆಂದು ಸಾರಿದರು. ಸರಳತೆಯೇ ದೈವೀಭಾವಗಳನ್ನು ತಂದುಕೊಡುತ್ತದೆಂದೂ ಬ್ರಹ್ಮಾನಂದಕ್ಕೆ ಇದು ಮೆಟ್ಟಿಲೆಂದೂ ಹೇಳುತ್ತಿದ್ದರು.

ಶರೀಫರು ತಮಗೆ ಸರಿ ಕಂಡದ್ದನ್ನು ಮುಚ್ಚುಮರೆಯಿಲ್ಲದೆ ಹೇಳುತ್ತಿದ್ದರು. ಆದರೆ, ಅವರದು ಮಾತೃಹೃದಯ. ಕರುಣೆ, ಮೈತ್ರಿ, ಪ್ರೇಮಲ ಸ್ವಭಾವ ಅವರ ಅಂತರಂಗದಲ್ಲಿ ಸದಾ ನೆಲೆಯಾಗಿರುತ್ತಿತ್ತು. ಶರೀಫರು ಲೋಕ ಹಿತಕ್ಕಾಗಿ ಬದುಕಿದರು. ಅವರ ಅಂತರಂಗಬಹಿರಂಗಗಳೆರಡೂ ಬ್ರಹ್ಮಧ್ಯಾನದಲ್ಲೇ ಇರುತ್ತಿದ್ದುವು. ಶರೀಫರು ತಮ್ಮ ಅವಸಾನ ಕಾಲವನ್ನು ತಿಳಿದುಕೊಂಡರು. ಅವರು ತಮ್ಮೆಲ್ಲ ಶಿಷ್ಯರನ್ನು ಕರೆದು ಯಾರೂ ದುಃಖಪಡಕೂಡದೆಂದೂ ಎಲ್ಲರೂ ಆತ್ಮಜ್ಞಾನದಲ್ಲಿ ಅನುಷ್ಠಾನಪರರಾಗಿಬೇಕೆಂದೂ ಹೇಳಿದರು. ಅವರು 'ಬಿಡತೇನಿ ದೇಹ ಬಿಡತೇನಿ। ಕೊಡತೇನಿ ಭೂಮಿಗೆ। ಇಡತೇನಿ ಮಹಿಮರ ನಡತೆಯ ಹಿಡಿದು। ಅವನಿಯೊಳು ಶಿಶುನಾಳಧೀಶನೇ ಗತಿಯೆಂದು। ಜವನ ಬಾಧೆಗೆದ್ದು ಶಿವಲೋಕದೊಳಗೆ ನಾ' ಎಂದು ಹಾಡುತ್ತ ದೇಹವನ್ನು ತ್ಯಜಿಸಲು ಅನುವಾದರು. ಆಗ ಅವರಿಗೆ ಎಪ್ಪತ್ತು ವರ್ಷ. ಶರೀಫರು ಶರಣತತ್ತ್ವವನ್ನು ಒಪ್ಪಿಕೊಂಡಿದ್ದರಷ್ಟೆ. ಆ ಸಂಪ್ರದಾಯದಂತೆ 'ವಿಭೂತಿವೀಳ್ಯೆ' ಮಾಡಿಸಿಕೊಂಡು ದೇಹತ್ಯಾಗ ಮಾಡಬೇಕೆಂಬ ಅಪೇಕ್ಷೆ ಅವರಿಗಿತ್ತು. ಈ ವಿಧಾನ ಅನುಸರಿಸುವುದಕ್ಕೆ ಜಂಗಮ ಪಾದಪೂಜೆ ಹಾಗೂ ಜಂಗಮಪಾದವನ್ನು ಮಸ್ತಕದ ಮೇಲೆ ಇಟ್ಟು ಶಿವಸಾಯುಜ್ಯ ಮಂತ್ರಗಳ ಪಠಣ ಅಗತ್ಯವಾಗಿತ್ತು. ಆದರೆ, ಶರೀಫರ ಮಸ್ತಕದ ಮೇಲೆ ಪಾದವನ್ನು ಇಡಲು ಯಾವ ಜಂಗಮನೂ ಮನಸ್ಸು ಮಾಡಲಿಲ್ಲ. ಕೊನೆಗೆ ಹಿರೇಮಠದ ಕರಿಬಸವಯ್ಯ ಎಂಬುವರು ಶರೀಫರ ಅಂತಿಮ

ಬಯಕೆಯನ್ನು ಈಡೇರಿಸಿದರು. ಆ ಕ್ಷಣವೇ ಅನಿಮಿಷ ದೃಷ್ಟಿಯಿಂದ ಶಿವಯೋಗದಲ್ಲಿ ತಮ್ಮ ನಿಲುವನ್ನು ಇರಿಸಿ; ಓಂಕಾರದ ಪ್ರಭೆಯಲ್ಲಿ ಅವರು ಬಯಲಾದರು.

ಮಹಮ್ಮದ್ ಶರೀಫರು ಶಿವಯೋಗಿ ಶರೀಫರಾಗಿ ಹತ್ತೊಂಭತ್ತನೆಯ ಶತಮಾನದಲ್ಲಿ ಹಿಂದೂಮುಸ್ಲಿಂ ಸಾಮರಸ್ಯದ ತಾತ್ವಿಕ ಭೂಮಿಕೆಯನ್ನು ಪಸರಿಸಿದ ಮಹಾಸಂತ. ವ್ಯಷ್ಟಿಯಿಂದ ಸಮಷ್ಟಿ ಬಾಳುವೆಯ ಮಹಾತತ್ತ್ವವನ್ನು ಸಾರುತ್ತ 'ಬೋಧ ಒಂದೇ ಬ್ರಹ್ಮಭಾವ ಒಂದೇ' ಎಂಬ ಸಾರ್ವತ್ರಿಕ ಹಾಗೂ ತಾತ್ವಿಕ ಮೌಲ್ಯವನ್ನು ಸಾರಿ ಜನಮಾನಸದಲ್ಲಿ ನೆಲೆನಿಂತಿದ್ದಾರೆ.

''ಲೋಕದ ಕಾಳಜಿ'', ''ಸ್ನೇಹ ಮಾಡಬೇಕಿಂತವಳು'', ''ಗುಡಿಯ ನೋಡಿರಣ್ಣ ದೇಹದ'', ''ಅಳಬೇಡ ತಂಗಿ ಅಳಬೇಡ'', ''ಕೋಡಗನ ಕೋಳಿ ನುಂಗಿತ್ತಾ ತಂಗಿ, ಕೋಡಗನ ಕೋಳಿ ನುಂಗಿತ್ತಾ!'', ''ಬಿದ್ದಿಯಬ್ಬೆ ಮುದುಕಿ ಬಿದ್ದಿಯಬ್ಬೆ'', ''ತರವಲ್ಲ ತಗಿ ನಿನ್ನ ತಂಬೂರಿ ಸ್ವರ, ಬರಿದೆ ಬಾರಿಸದಿರು ತಂಬೂರಿ'', ''ಮೋಹದ ಹೆಂಡತಿ ತೀರಿದ ಬಳಿಕ, ಮಾವನ ಮನೆಯ ಹಂಗಿನ್ಯಾಕೋ?'', ''ಹಾವು ತುಳಿದೇನೆ ಮಾನಿನಿ, ಹಾವು ತುಳಿದೇನೆ'',''ಸೋರುತಿಹುದು ಮನೆಯ ಮಾಳಿಗಿ, ಅಜ್ಞಾನದಿಂದ'',''ಎಲ್ಲರಂಥವನಲ್ಲ ನನ್ನ ಗಂಡ, ಬಲ್ಲಿದನು ಪುಂಡ, ಎಲ್ಲರಂಥವನಲ್ಲ ನನ್ನ ಗಂಡ'', ''ಎಂಥಾ ಮೋಜಿನ ಕುದುರಿ, ಹತ್ತಿದಮ್ಯಾಗ ತಿರುಗುವುದು ಹನ್ನೊಂದು'', ''ನನ್ನೊಳಗೆ ನಾ ತಿಳಕೊಂಡೆ'', ''ಬಿದಿರು ನಾನಾರಿಗಲ್ಲದವಳು''

ಅವರು ತತ್ವಪದಗಳ ರೂವಾರಿ. ತತ್ವಪದ ಎಂದರೆ ಜೀವನದಲ್ಲಿ ಮನುಷ್ಯ ಜೀವ ಮಾಡುವ ತಪ್ಪುಗಳನ್ನು, ಯೋಚಿಸುವ ರೀತಿಯನ್ನು ಯಾವುದೋ ಒಂದು ಸನ್ನಿವೇಶಕ್ಕೆ ಹೋಲಿಸಿ ಹಾಡಿನಿಂದ ವಿವರಿಸುವುದು. ಆ ಹಾಡನ್ನು ನೇರ ಅರ್ಥದಲ್ಲಿ ಕೇಳಿದರೆ ವಿಚಿತ್ರವೆನಿಸುವುದು ಆದರೆ ಅದರ ತಿರುಳು ಅರಿತು ಜೀವನಕ್ಕೆ ಹೋಲಿಸಿದರೆ ಅದರ ಅರ್ಥ ಹೊರಹೊಮ್ಮುವುದು. ಅವರು ಮುಸ್ಲಿಮರಾಗಿದ್ದರೂ ಅವರ ಗುರುಗಳು ಬ್ರಾಹ್ಮಣ ಗೋವಿಂದ ಭಟ್ಟರು.

ಅವರ ಗುರುಶಿಷ್ಯ ಸಂಬಂಧ ಉತ್ತರ ಕರ್ನಾಟಕದ ಮನೆಮಾತಾಗಿದೆ. ಇವರ ತತ್ವಪದಗಳ ಕೊನೆಯಲ್ಲಿ ಸಾಮಾನ್ಯವಾಗಿ 'ಶಿಶುನಾಳಧೀಶ' ಹಾಗೂ 'ಗುರು ಗೋವಿಂದರ' ಉಲ್ಲೇಖವಿರುತ್ತದೆ. ನವಲಗುಂದದ ನಾಗಲಿಂಗ ಸ್ವಾಮಿಗಳು ಇವರ ಪರಮ ಸ್ನೇಹಿತರು. ಹುಬ್ಬಳ್ಳಿಯ ಸಿದ್ಧಾರೂಢರೂ ಇವರ ಸಮಕಾಲೀನರು.

**ಉದಾಹರಣೆಗೆ ಶರೀಫರ ಒಂದು ಒಗಟಿನ ಪದ, ಒಡಪಿನ ಅಥವಾ ಬೆಡಗಿನ ಹಾಡು:**

'ಕೋಡಗನ್ನ ಕೋಳಿ ನುಂಗಿತ್ತಾ' ಎನ್ನುವ ಪದದಲ್ಲಿ; ಕೋಡಗ ಎಂದರೆ ಮಂಗಮರ್ಕಟ; ಚಂಚಲ ಮನಸ್ಸು. ಕೋಳಿ ಬೆಳಗಿನ ಸೂಚನೆ. ಕೋಳಿ ಕೂಗಿದರೆ

ಸೂರ್ಯೋದಯ; ಬೆಳಗಾಗುವುದು ಎಂದರೆ ಜ್ಞಾನೋದಯ. ಅದು ಆದಾಗ ಚಂಚಲ ಮನಸ್ಸು ಅದರಲ್ಲಿ ಕರಗಿಹೋಗುವುದು ಇದು ಕೋಳಿ ಕೋಡಗನನ್ನು ನುಂಗುವುದು. ವೇದಾಂತದಲ್ಲಿ ಮನಸ್ಸನ್ನು ಮರ್ಕಟಕ್ಕೆ ಹಾಗು ಜ್ಞಾನೋದಯವನ್ನು ಸೂರ್ಯೋದಯಕ್ಕೆ ಹೋಲಿಸುವರು ಇಲ್ಲಿ ಸೂರ್ಯೋದಯ ಸೂಚಿಸುವ ಕೋಳಿಗೆ ಹೋಲಿಸಿದೆ; ಜ್ಞಾನೋದಯವಾದಾಗ ಮನಸ್ಸು ಲಯವಾಗಿ ಹೋಗುವುದು. ಅದು ಕೋಳಿ ಕೋಡಗನನ್ನು ನುಂಗಿದಂತೆ. ಇಲ್ಲಿ ಆ ಪ್ರತಿಮೆ ಉಪಯೋಗಿಸಿ ಹಾಡಿದ್ದಾರೆ.

ಮುಂದಿನ ಪದ್ಯಗಳೆಲ್ಲಾ ಹೀಗೆ ಚಂಚಲತೆಯನ್ನು ಅಚಲ ಅವ್ಯಯ ಪರಬ್ರಹ್ಮ ತತ್ವವು ಅರಿವಾದಾಗ ಚಂಚಲತೆ ನಿಲ್ಲುವುದೆಂದು ಅನೇಕ ರೂಪಕದೊಡನೆ ಹಾಡಿದ್ದಾರೆ. ಕೊನೆಯ ಸಾಲು ಗುರು ಗೋವಿಂದರ ಕರುಣೆ ಶರೀಫರ ಆತ್ಮವನ್ನು ನಾನೆಂಬ ಭಾವವನ್ನು ನುಂಗಿ ಇಲ್ಲದಂತೆ ಮಾಡಿ ಜ್ಞಾನವನ್ನು ದೊರಕಿಸಿತು ಎಂಬುದು ತಾತ್ಪರ್ಯ.

**"ಕೋಡಗನ ಕೋಳಿ ನುಂಗಿತ್ತಾ। ನೋಡವ್ವ ತಂಗಿ ಕೋಡಗನ ಕೋಳಿ ನುಂಗಿತ್ತಾ"**

ಪರಮಾತ್ಮರೂಪ ಪರತತ್ತ್ವವಾಗಲೀ, ಪರಮಾತ್ಮನ ಸಾಕ್ಷಾತ್ಕಾರದ ಯಾವುದೇ ಸಾಧನಗಳಾಗಲೀ ಮತ್ತು ಪರಮಾತ್ಮನ ದಿವ್ಯವಾಣಿರೂಪ ಸಂದೇಶವಾಗಲೀ ಇವು ಯಾವುದೇ ಒಂದು ಜನಾಂಗದ ಅಥವಾ ಯಾವುದೇ ಒಂದು ಸಂಪ್ರದಾಯದ ಸ್ವತ್ತು ಅಲ್ಲವೆಂದು ದಿಟ್ಟತನದಿಂದ ಬೋಧಿಸಿದವರು ಶಿಶುನಾಳದ ಶರೀಫ ಸಾಹೇಬರು.

ಶಿಶುನಾಳ ಶರೀಫರು ಕನ್ನಡದ ಅನುಭಾವಿ ಕವಿ. ಲೌಕಿಕದ ಎಲ್ಲ ಬೆಡಗು ಬಿನ್ನಾಣಗಳನ್ನು ಬಲ್ಲ ಕವಿ. ಲೌಕಿಕ ಅನುಭವಗಳ ತಾತ್ವಿಕ ದರ್ಶನಕ್ಕಿಳಿದು ಮಾತಾಡಿದರು. ಹೀಗಾಗಿಯೇ ಅನುಭಾವಿ ಕವಿ ಎನಿಸಿಕೊಂಡರು. ಕನ್ನಡ ತತ್ವಪದಕಾರರಲ್ಲಿ ಅವರದೇ ಒಂದು ತೂಕ. 1819ನೇ ಶತಮಾನದಲ್ಲಿ ಕನ್ನಡ ಕಾವ್ಯದ ಭಿನ್ನ ಸಾಧ್ಯತೆಯೊಂದನ್ನು ರೂಪಿಸಿಕೊಟ್ಟರು. ತನ್ನ ಕಾಲದ ಸಾಮಾಜಿಕ ಸಂಘರ್ಷ, ಆಧುನಿಕತೆಯ ಪ್ರವೇಶ, ರಾಜಕಾರಣ, ಧರ್ಮಗಳ ಕೊಳುಕೊಡೆ, ಅಂಚಿನ ಸಮುದಾಯಗಳ ದನಿ ಎಲ್ಲವನ್ನು ಹಿಡಿದಿಟ್ಟು ಹುರಿಗೊಳಿಸಿ ಕಾವ್ಯವಾಗಿಸಿದರು. ಅವರ ಕಾವ್ಯದಲ್ಲಿ ಹೊಸ ಆಶಯ, ಹೊಸ ಆಕೃತಿ ಮೈದಳೆದ ಬಗೆಯನ್ನು ಕನ್ನಡ ಕಾವ್ಯಲೋಕ ಈಗಾಗಲೆ ಗುರುತಿಸಿದೆ.

ಕ್ರಾಂತಿಕಾರಿಕ ಕವಿಯೊಬ್ಬ ಕೇವಲ ಸಂವೇದನೆಯಲ್ಲಿ ಮಾತ್ರವಲ್ಲ ಅದರ ಆಕೃತಿ, ಭಾಷೆ, ಶೈಲಿ, ನುಡಿಗಟ್ಟಿನಲ್ಲೂ ಹೊಸತನಕ್ಕಾಗಿ ಹಂಬಲಿಸುತ್ತಾನೆ. ಶರೀಫರು ಹಾಗೆ ಹಂಬಲಿಸಿ ಎದೆಯ ಹಾಲನ್ನೂ, ಹಾಲಾಹಲವನ್ನೂ ಒಟ್ಟಿಗೇ ಕಾಣಿಸಿದರು. ಜಾತಿ, ಹಣ, ಅಧಿಕಾರವನ್ನು ಮೀರಿ ಬದುಕನ್ನು ಅರ್ಥೈಸಿಕೊಂಡ ಬಗೆಯೇ ಅವರ ಕಾವ್ಯದ ಒಟ್ಟು ಭಿತ್ತಿಯನ್ನು ಸೃಜಿಸಿದೆ. ಶರೀಫರಂಥ ಫಕೀರರಿಗೆ ಇದು ಸಹಜ

ಆಯ್ಕೆಯೇ ಆಗಿತ್ತು. ಕಳಸದ ಗುರು ಗೋವಿಂದಭಟ್ಟರ ಒಡನಾಟ ಇದನ್ನು ಇನ್ನೊಂದು ಎತ್ತರಕ್ಕೆ ಒಯ್ದಿತು. ಈ ಕವಿಗಳ ಸಂಬಂಧ ಎರಡು ಧರ್ಮಗಳ ಬೆಸುಗೆಯಲ್ಲಿ ಧರ್ಮದ ವಿಕಾರಗಳನ್ನು ಕಳೆದು ಒಳಿತನ್ನಷ್ಟೇ ಅನ್ವೇಷಿಸಿತು. ಸಹಜ, ಸರಳ ಬದುಕಿನ ನೆಮ್ಮದಿ, ಘನತೆಯನ್ನೇ ಹುಡುಕಿತು. ವಚನಕಾರರು 'ಛಲ ಬೇಕು ಶರಣಂಗೆ' ಎಂದರೆ, ಶರೀಫರು 'ಎಚ್ಚರವಿರಲಿ ತಮ್ಮಾ' ಎಂದರು. ಜಾತಿ, ಹಣ, ಅಧಿಕಾರ ಕುರಿತ ಎಚ್ಚರ. ಸ್ವಲ್ಪ ತಿಳಿದು ಸಂಸಾರ ಮಾಡಿದರೆ, ಎಚ್ಚರದಿಂದ ಜೀವನದ ವ್ಯಾಪಾರದಲ್ಲಿ ತೊಡಗಿದರೆ ನಾಲ್ಕು ದಿನ ನೆಮ್ಮದಿಯಾಗಿ ಬಾಳಬಹುದೆಂದರು. ದೇಹವೇ ಮಸೀದಿ, ದೇಗುಲವೆಂದು ನಂಬಿದರು. ತಮ್ಮ ಸಾಮಾನ್ಯ ತಿಳಿವಳಿಕೆಯ ದಾರಿಗಳನ್ನೇ ಘನವಾಗಿ ತೆರೆದು ತೋರಿಸಿದರು. ಜನ ಇಂಥ ತಿಳಿವಳಿಕೆಯ ದಾರಿಗಳಿಗೆ ಬೆರಗಾಯಿತು. ಗುಡ್ಡ, ಕಾಡು, ಮೇಡು ಅಲೆಯುತಿದ್ದ ಶರೀಫರು ತಮ್ಮ ಕವಿ ಎನಿಸಿತು. ಅವರ ಹುಚ್ಚಾಟಗಳು, ಮೌನಗಳ, ಜಗಳಗಳು ಒಳಗಣ್ಣು ತೆರೆಸುವ ಸಾಧನಗಳಾದವು. ದಂತಕತೆಗಳಾಗಿ ಸಮುದಾಯದ ಹಲವು ಅರ್ಥಗಳಿಗೆ ಕಾರಣವಾದವು. ಸ್ಥಳೀಯ ಅನುಭವಗಳು ಪ್ರಜ್ಞೆಗಳಾಗಿ ವಿಕಾಸಗೊಂಡವು. ವಿಚಾರಗಳಾಗಿ ತತ್ವಗಳಾಗಿ ಜನಮಾನಸದಲ್ಲಿ ಬೆರೆತುಹೋದವು. ಒಬ್ಬ ಕವಿಯ ನಿಜವಾದ ಅದೃಷ್ಟವೆಂದರೆ ಇದೇ ಇರಬೇಕು.

ಶರೀಫರ ತತ್ವಪದಗಳು ಯಾವುದಾದರೊಂದು ಸ್ಥಾಪಿತ ಮತಕ್ಕೆ ಗಂಟುಬಿದ್ದವುಗಳಲ್ಲ. ಶರೀಫರದೇ ಒಂದು ಮತವಿದೆ. ಅದು ರಾಮಾಯಣ, ಮಹಾಭಾರತ, ವಚನ, ಕೀರ್ತನೆ, ಪ್ರಭುಲಿಂಗಲೀಲೆ, ಸೂಫೀತತ್ವ ಎಲ್ಲವುಗಳಿಂದ ಕಲಿತಿದೆ. ತಮ್ಮ ಪರಿಸರದಲ್ಲಿ ಹಲವು ಪಂಥಗಳ ತೆಕ್ಕೆಗೂ ಬಂದರು. ಹುಬ್ಬಳ್ಳಿಯ ಸಿದ್ಧರೂಢರು, ಗರಗದ ಮಡಿವಾಳಪ್ಪನವರು, ನವಲಗುಂದದ ನಾಗಲಿಂಗಜ್ಜ ಇವರ ಒಡನಾಟ ಮತ್ತು ಇವರ ಕುರಿತ ಜನಕಥನಗಳು ಶರೀಫರ ಚಿಂತನೆಯ ದಾರಿಯನ್ನು ಭಿನ್ನವಾಗಿಸಿದವು. ಹಾಗೆಯೇ ಹೊಸಕಾಲದ ಮುನ್ಸೂಚನೆಗಳು ಕೂಡ ಇವೆ. ಗಿರಣಿಯ ವಿಸ್ತಾರ, ಬದುಕಿನ ಹಾಗೂ ಸಮಾಜದ ವಿಸ್ತಾರದ ಸಂಕೇತವೂ ಆಯಿತು. ಆ ಕಾಲದ ಪಲ್ಲಟಗಳ ಸೂಚನೆಯೂ ಆಯಿತು. ಎಲ್ಲ ಧರ್ಮ, ಸಂಪ್ರದಾಯಗಳ ಕರ್ಮಠತನವನ್ನು ಮೀರಿನಿಂತಿದ್ದೇ ದೊಡ್ಡ ಸಾಧನೆ. ಇಂಥ ಕರ್ಮಠತನವನ್ನು ಮೀರುವ ಹಲವು ಹೊಸ ಕಾವ್ಯದಾರಿಗಳು ಕನ್ನಡದಲ್ಲಿ ಮೊದಲ ಬಾರಿಗೆ ಎಂಬಂತೆ ಹೊಸ ಭಾಷೆಯಲ್ಲಿ ತೆರೆದುಕೊಂಡವು. ಕಾವ್ಯದ ಈ ಹೊಸ ದಾರಿಗಳು ಹೊಸ ಮೌಲ್ಯಗಳ ಸೂಚನೆಗಳು ಕೂಡ ಹೌದು.

**"ಗಂಧ ವಿಭೂತಿ ತೊಗಲಿಗೆ ಧರಿಸಿ, ಜಾತಿ ಜಾತಿ ಬ್ಯಾರೆಯೆನಿಸಿ"**

ಇವೆಲ್ಲ ಶರೀಫರು ಒಂದು ಮೌಲ್ಯವಾಗಿ ಕಂಡ ಬಗೆ. ಇಂಥ ಮೌಲ್ಯಗಳ

ಸ್ವೀಕಾರವೇ ನಿಜ ಬದುಕಿನ ಸ್ವೀಕಾರ ಕೂಡ ಆಗಿದೆ.

ತತ್ವಪದ ಪರಂಪರೆಯಲ್ಲಿ ಕಾಣುವ ಒಂದು ಸಮಸ್ಯೆ ಎಂದರೆ ಅದು ಹೆಣ್ಣಿನ್ನು ಕುರಿತಾದ ಅವರ ಗ್ರಹಿಕೆ. ಅದರ ಬಗೆಗೆ ಎಷ್ಟೇ ಯೋಚಿಸಿದರೂ ಅಲ್ಲಿ ಮಂಡಿತವಾಗಿರುವ ವಿಚಾರಧಾರೆಯು ಹೆಣ್ಣನ್ನು ಸಮಾನವಾದ ನೆಲೆಯಲ್ಲಿ ಗ್ರಹಿಸಿಯೇ ಇಲ್ಲ. ಇಂತಹ ಕಾಲಘಟ್ಟದಲ್ಲಿ ಹಲವು ಮಹಿಳಾ ತತ್ವಪದಕಾರಿಯರು ಈ ಸಾಧಕರ ಪರಂಪರೆಯಲ್ಲಿದ್ದು, ಮುನ್ನೆಲೆಗೆ ಬಂದಿದ್ದಿಲ್ಲ ಎಂಬುದನ್ನ ಗಮನಿಸಬಹುದು.

**ಉಪಸಂಹಾರ:**

ಸಮುದಾಯಗಳ ನಡುವೆ ಸಾಮರಸ್ಯವನ್ನು ಮೂಡಿಸುವಲ್ಲಿ ತತ್ವಪದಕಾರರ ಕೊಡುಗೆ ಅಪಾರವಾಗಿದೆ. ಅವರು ರಚಿಸಿದ ತತ್ವಪದಗಳು ಭಾಷೆ ಹಾಗೂ ತಾತ್ವಿಕತೆ ದೃಷ್ಟಿಯಿಂದ ಬಹು ಮೌಲಿಕವಾದ ರಚನೆಗಳಾಗಿವೆ.

ಕನ್ನಡ ಬದುಕಿನಲ್ಲಿ ತತ್ವಪದಕಾರರ ಪ್ರಭಾವ ಅಪಾರವಾದುದು. ಹಾದಿ ತಪ್ಪಿದ ಪ್ರಭುತ್ವಕ್ಕೆ ತತ್ವಪದಕಾರರು ನೀಡಿದ ಮಾತಿನ ಚಾಟಿಯೇಟು ಚರಿತ್ರೆಯ ಅಧ್ಯಯನದಲ್ಲಿ ವಿಶೇಷವಾಗಿ ಪರಿಗಣಿಸಲ್ಪಟ್ಟಿದೆ. ಸ್ತ್ರೀವಾದಿ ಚಿಂತನೆಗಳಿಗೂ ಮತ್ತು ಪುರುಷಾಧೀನ ರಾಜಕೀಯ ವ್ಯವಸ್ಥೆಗೂ ಒಂದು ಒಳನೋಟದ ಆತ್ಮವಿಮರ್ಶೆ ಸಾಧ್ಯವಿಲ್ಲದಿದ್ದರೆ, ಸಮಾಜದಲ್ಲಿ ಪರಿವರ್ತನೆ ಸಾಧ್ಯವಿಲ್ಲವೆಂದು ಹೇಳುವ ತತ್ವಪದಗಳು ಆಧುನಿಕತೆಯ ಈ ಕಾಲದಲ್ಲಿಯೂ ಅಧ್ಯಯನ ಯೋಗ್ಯವಾಗಿವೆ. ತತ್ವಪದ ಸಾಹಿತ್ಯದಲ್ಲಿ ಅನೇಕ ಮಹಿಳಾ ತತ್ವಪದಕಾರಿಯರು ತತ್ವಪದಗಳನ್ನು ರಚಿಸಿ ಸಮಾಜದಲ್ಲಿ ಗೋಚರಿಸಿದ ಸತ್ಯಾಂಶಗಳನ್ನು ತಮ್ಮ ತತ್ವಪದಗಳಲ್ಲಿ ಕಟ್ಟಿ ಹಾಡಿದ್ದಾರೆ.

## ಪರಾಮರ್ಶನ ಗ್ರಂಥಗಳು:


1. ಮಲ್ಲಿಕಾರ್ಜುನ ಜೆ. ಆಮ್ಲೆ, (2008), ದಲಿತ ತತ್ವಪದಕಾರ ಕಾಶಿನಾಥ ಪಂಚಶೀಲ ಗವಾಯಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. ಮೀನಾಕ್ಷಿ ಬಾಳಿ, 2021, ತತ್ವಪದ ಒಳಗಿನ ತಿಳಿವು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
3. ನಂಜುಂಡಸ್ವಾಮಿ ಬಿ., (2020), ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
4. ಕೆಂಪಣ್ಣವರ ಸಿ.ಜೆ., (2007), ಜ್ಞಾನ ಒಂದು ಇದ್ದ ಮ್ಯಾಲ ಮಾನ ಕೇನ ಕಡ್ಮಿ ಇಲ್ಲ, ಕನ್ನಡ ಜಾಗೃತಿ ಪುಸ್ತಕ ಮಾಲೆ, ರಾಯಚೂರು.
5. ಪಂಚಾಕ್ಷರಿ ಬಿ. ಪೂಜಾರಿ, (2006), ತತ್ವ ಸಂಪದ: ದಂಡಗುಂಡ, ಬಸವೇಶ್ವರ ಪ್ರಕಾಶನ, ಕಲಬುರಗಿ.
6. ವಿಜಯಶ್ರೀ ಸಬರದ, (1997), ಗುರು ಶಿಷ್ಯರ ತತ್ವಪದಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
7. ರಾಜಶ್ರೀ ಕಿಶೋರ್, (2021), ತತ್ವಪದಕಾರರ ಸಾಹಿತ್ಯ ಧಾರೆ, ಶೇಖರಯ್ಯ ನಂದಿ ಪ್ರಕಾಶನ, ರಾಯಚೂರು.
8. ಮೀನಾಕ್ಷಿ ಬಾಳಿ, (2021), ತತ್ವಪದದೊಳಗಿನ ತಿಳಿವು, ಕನ್ನಡ ನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ, ಕಲಬುರಗಿ.
9. ಪೀರ್ ಭಾಷಾ ಬಿ., (2006), ಶಿವಪ್ಪನವರ ತತ್ವಪದಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.